ಮುಖ್ಯಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಕಟ್ಟಡ ಮತ್ತು
ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029.
ಕಛೇರಿ: 080-29753350
karbuildworkerswelfare@gmail.com

ಸಂಖ್ಯೆ: ಕಕಾಮಂ/ಕ್ಲೈವಿಸು/ಸಿಆರ್-01/2021-22

ದಿನಾಂಕ:17-09-2021

## ಸುತ್ತೋಲೆ

**ವಿಷಯ:** ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೋಂದಾಯಿತ ಫಲಾನುಭವಿಗಳಿಗೆ ನೀಡುತ್ತಿರುವ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ.

**ಉಲ್ಲೇಖ:** 1.ಈ ಕಛೇರಿಯ ಸಮ ಸಂಖ್ಯೆಯಿರುವ ಪತ್ರ ಸಂಖ್ಯೆ: ಸಿಡಬ್ಲ್ಯೂಬಿ/ ಆರ್ಇಪಿ/ ಸಿಐಆರ್/ಸಿಆರ್-01/2013-14, ದಿನಾಂಕ:15-07-2014.

2. ಸರ್ಕಾರದ ಆದೇಶ ಸಂಖ್ಯೆ: ಕಾಇ 214 ಎಲ್ಇಟಿ 2020, ದಿನಾಂಕ: 26-08-2020

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೋಂದಾಯಿತ ಫಲಾನುಭವಿಗಳಿಗೆ ನೀಡುತ್ತಿರುವ ಮದುವೆ, ಶೈಕ್ಷಣಿಕ ಹಾಗೂ ಹೆರಿಗೆ ಸಹಾಯಧನ ಸೌಲಭ್ಯಗಳನ್ನು ವಿಲೇವಾರಿ ಮಾಡುವ ಬಗ್ಗೆ ಮಾನದಂಡಗಳು, ಅರ್ಹತೆಗಳು ನಮೂನೆಗಳು ಮತ್ತು ಚೆಕ್‌ಲಿಸ್ಟ್ ಗಳನ್ನು ಉಲ್ಲೇಖ-1ರ ಪತ್ರದಲ್ಲಿ ತಮಗೆ ತಿಳಿಸಲಾಗಿರುತ್ತದೆ.

ಈ ಸುತ್ತೋಲೆಯನ್ವಯ ಮದುವೆ, ಶೈಕ್ಷಣಿಕ, ಹೆರಿಗೆ ಧನಸಹಾಯಕ್ಕೆ ಸಂಬಂಧಿಸಿದ ಅರ್ಜಿಗಳನ್ನು ವಿಲೇವಾರಿ ಮಾಡುವಾಗ ಅರ್ಜಿದಾರರ ಮಾಸಿಕ ವಂತಿಕೆಯು ಬಾಕಿ ಇದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ. ಅದೇ ರೀತಿ ಘಟನೋತ್ತರವಾಗಿ ಮಾಸಿಕ ವಂತಿಕೆಯನ್ನು ಪಾವತಿಸಿ ಅರ್ಜಿಯನ್ನು ಸಲ್ಲಿಸಿದ್ದಾಗ್ಯೂ ಕೂಡ ಅಂತಹ ಅರ್ಜಿಗಳನ್ನು ಉಲ್ಲೇಖ-1ರನ್ವಯ ತಿರಸ್ಕರಿಸಲಾಗುತ್ತಿದೆ. ಈ ಬಗ್ಗೆ ಹಲವಾರು ಕಾರ್ಮಿಕ ಸಂಘಟನೆ ಹಾಗೂ ಸಾರ್ವಜನಿಕರಿಂದ ಮಂಡಳಿಗೆ ದೂರುಗಳು ಸ್ವೀಕೃತಗೊಂಡಿದೆ. ಇದರ ಆದಾರದ ಮೇಲೆ ಉಲ್ಲೇಖ-1ರ ಸುತ್ತೋಲೆ ಹಾಗೂ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ನಿಯಮ 21ಎ ಅನ್ನು ಪರಿಶೀಲಿಸಿ ಉಲ್ಲೇಖಿತ 1ರ ಸುತ್ತೋಲೆಯನ್ನು ಭಾಗಶಃ ಮಾರ್ಪಡಿಸಿ ಚೆಕ್‌ಲಿಸ್ಟ್ ಪ್ಯಾರ 1ಕ್ಕೆ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಕಲಂ 22(1), 17 ಹಾಗೂ ಸದರಿ ಕಾಯ್ದೆಯ ಕರ್ನಾಟಕ ನಿಯಮಗಳು 2006ರ ನಿಯಮ 21-ಎ ಪ್ರಕಾರ ನೋಂದಾಯಿತ ಫಲಾನುಭವಿಯ ಸದಸ್ಯತ್ವವು ನಿರಂತರ 12 ತಿಂಗಳ ಕಾಲ ವಂತಿಕೆಯನ್ನು ಪಾವತಿಸದಿದ್ದಲ್ಲಿ ಮಾತ್ರ ಅಂತ್ಯಗೊಳ್ಳುತ್ತದೆ. ನಿಯಮ 21ಎ ರನ್ವಯ ಫಲಾನುಭವಿಗೆ ತನ್ನ ಸದಸ್ಯತ್ವವನ್ನು ನವೀಕರಿಸಲು 12 ತಿಂಗಳ ಕಾಲ ಅವಕಾಶವಿರುತ್ತದೆ. ಫಲಾನುಭವಿಯು ನೋಂದಣಿಯನ್ನು 12 ತಿಂಗಳ ಒಳಗೆ ನವೀಕರಣಗೊಳಿಸಕೊಳ್ಳದಿದ್ದಲ್ಲಿ, ಆ ನಂತರ ಫಲಾನುಭವಿಗಳಿಗೆ ಸೌಲಭ್ಯಗಳನ್ನು ನೀಡಲು ಅವಕಾಶವಿರುವುದಿಲ್ಲ.

ಮುಂದುವರೆದು, ಪ್ರಸ್ತುತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಣಿ ಮತ್ತು ನವೀಕರಣವನ್ನು ಶುಲ್ಕ ರಹಿತವಾಗಿ ಮಾಡಬೇಕೆಂದು ಉಲ್ಲೇಖಿತ 2ರಲ್ಲಿ ಆದೇಶ ಹೊರಡಿಸಲಾಗಿದೆ. ಹಿನ್ನಲೆಯಲ್ಲಿ ನವೀಕರಣ ಶುಲ್ಕವನ್ನು ಪಾವತಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗದ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಕರ್ನಾಟಕ ನಿಯಮ 21–ಎ ಈ ಕೆಳಕಂಡಂತಿದೆ;

*"Rule 21-A, Contribution of building worker:*

*(1) Every construction worker whose name has been registered as a beneficiary under sub-rule (1) of Rule 20 shall contribute subscription of Rs.150/-which shall be valid for a period of three years or subscription of Rs.25/-, which shall be valid for a period of one year, along with an application in Form V(E), shall be remitted to the Board.*

*(2) If a beneficiary commits defaults in the payment of contribution, continuously for a period of one year, he shall cease to be the beneficiary of the fund. However, with the permission of the Secretary or an officer authorized by him in this behalf, the membership may be resumed on repayment of arrears of contribution with a fine of Rs.2/- per month, subject to the condition that such resumption shall not be allowed more than twice".*

ಈ ಮೇಲಿನ ನಿಯಮ 21ಎ ರ ವ್ಯಾಪ್ತಿಗೆ ಒಳಪಡುವ ಫಲಾನುಭವಿಗಳ ಅರ್ಜಿಗಳನ್ನು ಸದಸ್ಯತ್ವ ನವೀಕರಣಗೊಂಡಿರುವುದಿಲ್ಲ ಎನ್ನುವ ಕಾರಣಕ್ಕೆ ತಿರಸ್ಕರಿಸಬಾರದೆಂದು ಈ ಮೂಲಕ ಸೂಚಿಸಲಾಗಿದೆ. ಹಾಗೂ ಅಂತಹ ಕಾರ್ಮಿಕರಿಂದ ಸದಸ್ಯತ್ವ ನವೀಕರಣಕ್ಕೆ ಅರ್ಜಿ ಪಡೆದು ಅವರ ಅರ್ಜಿಗಳನ್ನು ವಿಲೇವಾರಿ ಮಾಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಈ ಸುತ್ತೋಲೆಯು ಸಹಾಯಕ ಕಾರ್ಮಿಕ ಆಯುಕ್ತರು/ಕಾರ್ಮಿಕ ಅಧಿಕಾರಿ/ಹಿರಿಯ ಕಾರ್ಮಿಕ ನಿರೀಕ್ಷಕರು/ ಕಾರ್ಮಿಕ ನಿರೀಕ್ಷಕರ ಕಛೇರಿಗಳಲ್ಲಿ ಪ್ರಸ್ತುತ ಬಾಕಿ ಉಳಿದಿರುವ ಹಾಗೂ ಮುಂದಿನ ದಿನಗಳಲ್ಲಿ ಸ್ವೀಕೃತಗೊಳ್ಳುವ ವಿವಿಧ ಸೌಲಭ್ಯಗಳ ಕ್ಲೈಮ್ ಅರ್ಜಿಗಳಿಗೆ ಮಾತ್ರ ಅನ್ವಯಿಸುತ್ತದೆ.

17/9

(ಅಕ್ರಂ ಪಾಷ ಭಾ.ಆ.ಸೇ)
ಮುಖ್ಯಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕ.ಕ &ಇ.ನಿ.ಕಾ.ಕ ಮಂಡಳಿ
ಬೆಂಗಳೂರು

ಗೆ,

1. ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರುಗಳು
2. ಎಲ್ಲಾ ಕಾರ್ಮಿಕ ಅಧಿಕಾರಿಗಳು
3. ಎಲ್ಲಾ ಹಿರಿಯ ಕಾರ್ಮಿಕ ನಿರೀಕ್ಷಕರು/ಕಾರ್ಮಿಕ ನಿರೀಕ್ಷಕರುಗಳು

ಪ್ರತಿಯನ್ನು:

ಎಲ್ಲಾ ಉಪ ಕಾರ್ಮಿಕ ಆಯುಕ್ತರುಗಳ ಮಾಹಿತಿಗಾಗಿ ಸಲ್ಲಿಸಿದೆ.